**ಅಸಲು ದಾವೆ ಸಂಖ್ಯೆ -50/2020**

**ಪಿ.ಡಬ್ಲ್ಯೂ-1**

**<u>ದಿನಾಂಕ 02-02-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು : ಶ್ರೀ.ಎಮ್.ಎಮ್.ಟಿ ವಕೀಲರಿಂದ ಪ್ರತಿವಾದಿ-1 ಪರವಾಗಿ</u>**

1.ದಿಃ04.06.1976 ರ ನೋಂದಾಯಿತ ವಿಭಾಗ ಪತ್ರವನ್ನು ತಾವು ನೋಡಿದ್ದೀರಾ ಎಂದರೆ ನೋಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಮುಂದುವರೆದು ಸದರಿ ದಾಖಲಾತಿ ಖೊಟ್ಟಿ ದಾಖಲಾತಿ ಎಂದು ಹೇಳುತ್ತಾರೆ. ಸರ್ವೆ ನಂ.130/1 ಇದು ನಿಮ್ಮ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಿಮ್ಮ ತಂದೆಯವರು ತೀರಿಕೊಂಡ ನಂತರ ಅದರ ವಾರಸುದಾರರಾದ ನೀವು ನಿಮ್ಮ ಹೆಸರನ್ನು ಸದರಿ ಆಸ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳಲ್ಲಿ ದಾಖಲಿಸಿಕೊಂಡಿರಿ ಎಂದರೆ ಸರಿ. ಈ ಪ್ರಕರಣದಲ್ಲಿ 1 ನೇ ಪ್ರತಿವಾದಿಯಾದ ಬಾಳಪ್ಪ ಪಾಟೀಲ ಇವರು ಹಾಜರಪಡಿಸಿದ ದಾಖಲಾತಿಗಳ

ಬಗ್ಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ತಂದೆಯವರು ಚಿನ್ನವ್ವ ಪಾಟೀಲ ಮತ್ತು 1 ನೇ ಪ್ರತಿವಾದಿ ಬಾಳಪ್ಪ ಪಾಟೀಲ ಅವರ ವಿರುದ್ದ ಅಸಲು ದಾವಾ ಸಂಖ್ಯೆ 144/1982 ರಂತೆ ದಾವೆ ಸಲ್ಲಿಸಿದ್ದು ತಮಗೆ ಗೊತ್ತಿದೆಯಾ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ದಾವೆಯಲ್ಲಿ ನಿಮ್ಮ ತಂದೆ ದಾವಾ ಆಸ್ತಿಯಾದ ಸರ್ವೆ ನಂ.144/2 ಇದರ ಮೇಲೆ ಭೋಜಾ ಇದ್ದು ಅದರ ತುಂಬುವ ಜವಾಬ್ದಾರಿ ಚಿನ್ನವ್ವ ಅವರದ್ದು ಇದೆ ಎಂದು ತಕರಾರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಿಮ್ಮ ತಂದೆಯವರು 1976 ರಲ್ಲಿ ಆದ ವಿಭಾಗ ಪತ್ರವನ್ನು ಒಪ್ಪಿಕೊಂಡು ಅದರಂತೆ ನಡೆದುಕೊಂಡು ಬಂದಿದ್ದಾರೆ ಎಂದರೆ ಅದೆಲ್ಲ ಖೊಟ್ಟಿಯಾಗಿದೆ ಎಂದು ಹೇಳುತ್ತಾರೆ. ನಿಮ್ಮ ತಂದೆಯವರ ಜೀವಿತಾವಧಿಯಲ್ಲಿ ಅವರು ದಿಃ04.06.1976 ರ ವಿಭಾಗ ಪತ್ರವನ್ನು ಎಲ್ಲಿಯು ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಯಾವ ಕಾರಣಕ್ಕಾಗಿ ನಿಮ್ಮ ಪ್ರಕಾರ ದಿಃ04.06.1976 ರ ವಿಭಾಗ ಪತ್ರ ಖೊಟ್ಟಿ ಇದೆ ಎಂದು ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಹೇಳುತ್ತಾರೆ. ನಿಮಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿ-3 ಪರ ವಕೀಲರು ಗೈರು ಹಾಜರ ಇದ್ದು 4 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರ ಇದ್ದು, 4 ನೇ ಪ್ರತಿವಾದಿಯವರು ಯಾವುದೇ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಮತ್ತು ಪ್ರಕರಣವನ್ನು ಮುಂದೂಡಲು ಯಾವುದೇ ಸಕಾರಣಗಳು ಇಲ್ಲದ್ದರಿಂದ ಪ್ರತಿವಾದಿ-3 ಮತ್ತು 4 ರವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ